## ಜನಾಂಗೀಯತೆ ಮತ್ತು ರಾಜಕೀಯ ಮಧ್ಯಸ್ಥಗಾರರು

'ಈ ಮೇಲಿನ ಚರ್ಚೆಯು ಪ್ರಸಕ್ತ ಸಂಘರ್ಷಗಳನ್ನು ನಿರೂಪಿಸುವ ಸಮಕಾಲೀನ ಮಾಧ್ಯಮಗಳ ಜನಾಂಗೀಯತೆಯ ಸಂಗತಿಗಳಿಗಿಂತ, ಹೆಚ್ಚಾಗಿ ಸಂಸ್ಕೃತಿ ಮತ್ತು ಸಂಸ್ಕೃತಿಯ ಬಹುತ್ವ ಸಿದ್ಧಾಂತ ಮತ್ತು ಜನಾಂಗೀಯ ಸಂವೇದನಾಶೀಲತೆಯನ್ನು ರೂಪಿಸುವ ಕೆಲ ಸಾಮಾಜಿಕ ಪ್ರಕ್ರಿಯೆಗಳ ಕುರಿತಾದದ್ದು. ಯಾರಾದರೊಬ್ಬರು ಮಾಧ್ಯಮದಲ್ಲಿ ಅಥವಾ ಸಮಾಜವಿಜ್ಞಾನಗಳಲ್ಲಿ ಜನಾಂಗೀಯತೆಯ ಕುರಿತು ಮಾತನ್ನಾಡಿದರೆ ಗಮನ ಸಂಕುಚಿತವಾಗಿ ಕೆಲ ಆಧುನಿಕ ಪ್ರಭುತ್ವ ರಚನೆಗಳಲ್ಲಿ ಆಗುವ, ಅಂದರೆ, ಇಂದು ಜನಾಂಗೀಯ ಸಂಘರ್ಷಗಳು ಉಂಟಾಗುವ ಈ ಸಾಂಸ್ಕೃತಿಕ ವಿಭಿನ್ನತೆಗಳ ನೆಲೆಯ ರಾಜಕೀಯಕರಣದ ಮೇಲೆ ಕೇಂದ್ರೀಕರಿಸಲಾಗುತ್ತದೆ. ಈ ಸಂಗತಿಗಳನ್ನು ಉದ್ದೇಶಿಸಲು ನಾನು ಕೆಲ ರೀತಿಯ ನಾಯಕರು ಸಾಮೂಹಿಕ ರಾಜಕೀಯ ಕ್ರಿಯೆಗಳಲ್ಲಿ ಜನಾಂಗೀಯ ಅಸ್ಮಿತೆಗಳನ್ನು ಸಕ್ರಿಯಗೊಳಿಸುವ ಪ್ರಕ್ರಿಯೆಗಳ ಕುರಿತಾದ ಹೆಚ್ಚಿನ ವಿವರಗಳನ್ನು ಸೇರಿಸಬೇಕಾಗುತ್ತದೆ. ಈ ಸಮಕಾಲೀನ ಘಟನೆಗಳಿಗೆnf ಅನೇಕ ವೇಳೆ "retribalisation(ರೀಟ್ರೈಬಲೈಸೇಷನ್ - ಪುನರಾದೀಕರಣ)"' ಎನ್ನುವ ಐತಿಹಾಸಿಕ ದೃಷ್ಟಿಕೋನವನ್ನು ಆರೋಪಿಸಿದ್ದು, ಅವುಗಳು ಒಂದು ರೀತಿಯಲ್ಲಿ ಅಪ್ರಚುರ ಮತ್ತು ಅಸಹಜ ಎಂದು ತಿರಸ್ಕರಿಸಲಾಗಿದೆ. ಇದು ಡೇವಿಡ್ ಮೇಬರಿ-ಲ್ಯೂಯಿಸ್ (David Maybury-Lewis) ತನ್ನ ವಿಚಾರ ಸಂಕಿರಣದಲ್ಲಿ ಪ್ರಸ್ತಾಪಿಸಿದ ಮೇಲ್ನೋಟಕ್ಕೆ ಸಮಂಜಸವೆಂದು ಕಾಣುವ ಪ್ರಾಯಶಃ ಸತ್ಯಾಂಶಕ್ಕೆ ವಿರುದ್ಧವಾಗಿರುವುಗಳಲ್ಲಿ ಒಂದಾಗಿದೆ. ಈ ವಿದ್ಯಮಾನಕ್ಕೂ, ಬುಡಕಟ್ಟು ಪ್ರಜ್ಞೆ (tribalism) ಮತ್ತು ಪೂರ್ವ ಪ್ರಭುತ್ವ ರಾಜಕೀಯ ವ್ಯವಸ್ಥೆಗಳಿಗೂ ಯಾವುದೇ ಸಂಭಂದವಿಲ್ಲ. ಪ್ರತಿಯಾಗಿ ಅದು ನಿರ್ದಿಷ್ಟ ಸ್ವರೂಪದ ಪ್ರಭುತ್ವ ರಚನೆ, ಹಾಗೂ ಅದು ಸೃಷ್ಟಿಸುವ ರಾಜಕೀಯ ಅವಕಾಶಗಳ ಬಗೆಗೆ ಜನರ ಪ್ರತಿಕ್ರಿಯೆ ಎಂದು ನಾನು ನಂಬುತ್ತೇನೆ. ಮುಂದುವರೆದು ಹೇಳುವುದಾದರೆ, ಜನಾಂಗೀಯ ಆಧಾರದ ಮೇಲೆ ಸಂಘರ್ಷಕ್ಕೆ ರಾಜಕೀಯ ಸಜ್ಜುಗೊಳಿಸುವಿಕೆ, ಸಾಮೂಹಿಕವಾದ ಜನಪ್ರಿಯ ಸಂವೇದನೆಗಳಲ್ಲ, ಬದಲಾಗಿ, ಅವು ರಾಜಕೀಯ ಮಧ್ಯಸ್ಥಗಾರರು ಮಾಡುವ ಪ್ರತಿಬಂಧಕ-ತಂತ್ರಗ ತಂತ್ರಗಳ ಪರಿಣಾಮವೆಂದು ಗುರುತಿಸುವುದು ಮುಖ್ಯವಾಗುತ್ತದೆ. ಬಹು ಸಂಸ್ಕೃತಿಯ ರಾಷ್ಟ್ರಗಳಲ್ಲಿ ಸಂಬಂಧಗಳ ಇಂತಹ ದುರಂತ ವಿಕೃತಿಗಳನ್ನು ತಡೆಯುವ ಮತ್ತು ಹಿಮ್ಮುಖ ತಿರುಗಿಸುವ ಸಾಮರ್ಥ್ಯವು ಈ ಪ್ರೇರಕಶಕ್ತಿಗಳನ್ನು ನಿಖರವಾಗಿ ಅರ್ಥಮಾಡಿಕೊಳ್ಳುವ ನಮ್ಮ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

ಸ್ಥೂಲವಾಗಿ ಹೇಳುವುದಾದರೆ, ನಾವು ಇಂದು ನೋಡುವ ಸಂಘರ್ಷಗಳು ಮುಖ್ಯವಾಗಿ, ಸಾಂಸ್ಕೃತಿಕ ಭಿನ್ನತೆಯ ರಾಜಕೀಯವನ್ನು ತಮ್ಮ ನಾಯಕತ್ವದ ಆಕಾಂಕ್ಷೆಗಳ ಪೂರೈಕೆಗಾಗಿ ಬಳಸಿಕೊಳ್ಳುವ ಮಧ್ಯಮ ಶ್ರೇಣಿಯ ರಾಜಕಾರಣಿಗಳ ಕೆಲಸ ಎಂದು ನಾನು ಹೇಳಬಯಸುತ್ತೇನೆ. ಇದು ಅವರಿಗೆ ಪ್ರಲೋಭನಕಾರಿಯಾಗಿದೆ. ಏಕೆಂದರೆ, ಜನಾಂಗೀಯ ಅಸ್ಮಿತೆಗಳಲ್ಲಿ ಅವರು ತಮಗಾಗಿ ಕಾಯುತ್ತಿರುವ ಒಂದು ಸಶಕ್ತವಾದ ನಿರ್ದಿಷ್ಟ ಸ್ವಹಿತಾಸಕ್ತಿ ಗುಂಪನ್ನು ಕಾಣುತ್ತಾರೆ, ಮತ್ತು ಈ ಪ್ರಕ್ರಿಯೆಯನ್ನು ಚಾಲನೆಗೆ ತರಲು ಬೇಕಾದ ಕೀಲಿಕೈಯನ್ನು ಗುರುತಿಸುವುದು ಮಾತ್ರ ಅವರು ಮಾಡಬೇಕಾದ ಕೆಲಸ. ಮುಖಂಡರು ಈ ಗುಂಪುಗಳನ್ನು ಗುರುತಿಸಿ, ಕೆಲವು ವ್ಯತಿರಿಕ್ತ ಸಾಂಸ್ಕೃತಿಕ ಭಿನ್ನತೆಗಳನ್ನು ಹೆಚ್ಚು ಪ್ರಮುಖವಾಗಿಸಿ, ಮತ್ತು ಮೇಲಾಗಿ ಇವುಗಳನ್ನು ಭೂತಕಾಲದಲ್ಲಾಗಲೀ ಅಥವಾ ವರ್ತಮಾನದಲ್ಲಿ ಹೆಚ್ಚಿಸುವುದು ಆಗಲೀ, ಮೇಲ್ಬರುವ ಅಸಮಾಧಾನಗಳು ಮತ್ತು ಅನ್ಯಾಯಗಳಿಗೆ ಕೊಂಡಿಹಾಕುವುದರ ಮೂಲಕ, ಅವುಗಳನ್ನು ಸಜ್ಜುಗೊಳಿಸುತ್ತಾರೆ. ಅವರು ತಾವು ನೀಡಿದ ತೃಪ್ತಿಯ ಭರವಸೆ ಕಡೆ ಕರೆದೊಯ್ಯಲು ಅಂತಹ ಗುಂಪುಗಳನ್ನು ಅತೃಪ್ತಿ

ಹೊಂದಿದ ಗುಂಪುಗಳಾಗಿ ಸಜ್ಜುಗೊಳಿಸುತ್ತಾರೆ. ವಾಸ್ತವವಾಗಿ, ಪ್ರತಿಸ್ಪರ್ಧಿ ಮುಖಂಡರು ಅಥವಾ ಅಭ್ಯರ್ಥಿಗಳು ನಿರಂತರವಾಗಿ ಸಂಘರ್ಷ ಮತ್ತು ವ್ಯತ್ಯಾಸಗಳನ್ನು ತೀವ್ರಗೊಳಿಸಲು ಜನಾಂಗೀಯ ಆಮಿಷ ಒಡ್ಡುವುದರ ಮೂಲಕ ವಿರೋಧಿಸುವ ರಾಜಕೀಯದಲ್ಲಿ ತೊಡಗುತ್ತಾರೆ. ಏಕೆಂದರೆ, ನೀವು ಒಮ್ಮೆ ಈ ಪಥದಲ್ಲಿದ್ದೀರಿ ಎಂದಾದರೆ ಆಗ್ರಹಪೂರ್ವಕ ವಾಕ್ಚಾತುರ್ಯದಿಂದ ನಿಮ್ಮ ಬದ್ಧತೆಯ ಆಧಿಕ್ಯವನ್ನು ಸಾಧಿಸಬಹುದು ಮತ್ತು ಆ ಮೂಲಕ ಹೆಚ್ಚಿನ ಬೆಂಬಲ ಮತ್ತು ಹೆಚ್ಚು ಅಧಿಕಾರವನ್ನು ಕೋರಬಹುದು. ಅಭ್ಯರ್ಥಿಗಳು ತಾವು ಭರವಸೆ ನೀಡಿದ ನೆಲೆಯತ್ತ ತಮ್ಮ ಅನುಯಾಯಿಗಳನ್ನು ಮುನ್ನಡೆಸಲು ಜನರು ತಮ್ಮೊಂದಿಗೆ ಸೇರುವ ಅಗತ್ಯತೆಯನ್ನು ಖಚಿತಪಡಿಸಿಕೊಳ್ಳಲು, ಅವರು ಬೇರೆಯವರ ಅತಿರೇಕ ಲಕ್ಷಣವನ್ನು ಮತ್ತು ಪ್ರಸಕ್ತ ಸಂದರ್ಭದಲ್ಲಿ ಇರುವ ತೊಡಕುಗಳನ್ನು ಒತ್ತಿ ಹೇಳುತ್ತಾರೆ. ಈ ತರಹದ ಜನಾಂಗೀಯ ಸಜ್ಜುಗೊಳಿಸುವಿಕೆಯ ಅಲೆಗಳ ಉದಯ, ನಿಯಂತ್ರಣ, ಮೌನಗೊಳಿಸುವುದು ಮತ್ತು ಅನುಭವಗಳನ್ನು ಅಳಿಸುವ ಪ್ರಕ್ರಿಯೆಗಳನ್ನು ತೀವ್ರಗೊಳಿಸುತ್ತದೆ ಮತ್ತು ಆ ಮೂಲಕ ತಮ್ಮದೇ ಆದ ಪೂರ್ವಭಾವಿಗಳನ್ನು  ಕ್ರಮೇಣ ಸೃಷ್ಟಿಸುತ್ತವೆ. ಜನಾಂಗೀಯ ಗುಂಪಿನ ಹೊರತಾದ ಶ್ರೀಮಂತವಾದ ಸಂಬಂಧಗಳ ಮತ್ತು ಅನುಭವಗಳ ಜಾಲಬಂಧ ಹೊಂದಿರುವ ವ್ಯಕ್ತಿಗಳಿಗೆ ಈ ವಿಷಯಗಳು ನಿಷೇಧಿಸಲ್ಪಟ್ಟಿವೆ, ಮೌಲ್ಯರಹಿತವಾಗಿವೆ, ಅಥವಾ ಇನ್ನೂ ಗಂಭೀರವಾಗಿ, ಇನ್ನು ಮುಂದೆ ಅವುಗಳಿಗೆ ಅವಕಾಶಗಳನ್ನು ನೀಡಬಾರದು, ಎಂದು ತಿಳಿಸಲಾಗುತ್ತದೆ. ನಾವು ನಮ್ಮ ನಿರ್ದಿಷ್ಟ ರಾಜಕೀಯ ಉದ್ದೇಶಗಳಿಗೆ ಅಗತ್ಯವಾದ ರಾಜಕೀಯ ಬಲವನ್ನು ಬೆಳೆಸಿಕೊಳ್ಳಲು ಸಬಲರಾಗಿರಬೇಕು ಮತ್ತು ಒಗ್ಗಟ್ಟಾಗಿರಬೇಕು ಎಂದು ತಿಳಿಸಲಾಗುತ್ತದೆ. ಈ ಉದ್ದೇಶಗಳು ರಾಜಕೀಯ ಮಧ್ಯಸ್ಥಗಾರರಿಂದ ಒಂದು ಪ್ಯಾಕೇಜಾಗಿ ಸೂತ್ರೀಕರಿಸಲ್ಪಡುತ್ತವೆ. "ಹೌದು, ನಾನು ಈ ಕಾರಣಕ್ಕಾಗಿ ಜನಾಂಗೀಯ ಅಸ್ಮಿತೆಯನ್ನು ಸಕ್ರಿಯಗೊಳಿಸಲು ಬಯಸುತ್ತೇನೆ. ಆ ಕಾರಣಕ್ಕಾಗಿ ಅಲ್ಲ. ಈ ಕಾರ್ಯನೀತಿಗೆ ನಿಮಗೆ ಬೆಂಬಲ ನೀಡುತ್ತೇನೆ, ಆ ಕಾರ್ಯನೀತಿಗೆ ಅಲ್ಲ" ಎಂದು ಆಯ್ಕೆ ಮಾಡಲು ಜನರನ್ನು ಸ್ವತಂತ್ರವಾಗಿ ಬಿಡುವುದಿಲ್ಲ. ಹೀಗೆ, ಈ ಒಟ್ಟು ಮೊತ್ತದ ಪ್ರಕ್ರಿಯೆಯು ವ್ಯಕ್ತಿಯ ಆಯ್ಕೆ ಮಾಡುವ ಮತ್ತು ವರ್ತಿಸುವ ಸ್ವಾತಂತ್ರ್ಯವನ್ನು, ಪರಿಣಾಮಕಾರಿಯಾಗಿ ಸೀಮಿತಗೊಳಿಸುತ್ತದೆ. ತಡೆಗಳಿರುವ ಮೊದಲೇ ಕಟ್ಟುಕಟ್ಟಲಾದ ಕಾರ್ಯಕ್ರಮಗಳು ಸೃಷ್ಟಿಸಲಾಗುತ್ತವೆ ಮತ್ತು 'ಇದು ಅಥವಾ ಅದು ಮಾತ್ರ' ಎನ್ನುವ ಆಯ್ಕೆಗಳನ್ನು ಹೇರಲಾಗುತ್ತವೆ. ಜನರ ಬದುಕಿನಲ್ಲಿನ ವೈವಿಧ್ಯತೆ ಮತ್ತು ಅವರ ಸ್ವಂತ ವೈಯಕ್ತಿಕ ಬದುಕಿನ ಆಯ್ಕೆಗಳು ಕಡಿಮೆಯಾಗುತ್ತವೆ ಮತ್ತು ಅವರು ಯಾರು ಮತ್ತು ಅವರು ಏನು ಮಾಡಬಹುದು ಎನ್ನುವ ಅವರ ಪರಿಕಲ್ಪನೆಗಳು ಸೀಮಿತವಾಗುತ್ತವೆ  ಮತ್ತು ಕಡಿತಗೊಳ್ಳುತ್ತದೆ.

ಟೋನ್ ಬ್ರಿಂಗಾ (Tone Bringa) ಎನ್ನುವ ನಮ್ಮ ಮಾನವಶಾಸ್ತ್ರದ ಸಹೋದ್ಯೋಗಿಯೊಬ್ಬರು ಸಮಸ್ಯೆ ಪ್ರಾರಂಭವಾಗುವ ಮೊದಲು,  ಬಾಸ್ನಿಯಾದ ಪಟ್ಟಣವೊಂದರಲ್ಲಿ ಜನಾಂಗಶಾಸ್ತ್ರಜ್ಞರಾಗಿ ಕೆಲಸ ಮಾಡುತ್ತಿದ್ದರು. ಅವಳ ಪಟ್ಟಣದಲ್ಲಿ ಮುಖ್ಯವಾಗಿ ಮುಸ್ಲಿಮರು ಮತ್ತು ರೋಮನ್ ಕ್ಯಾಥೊಲಿಕ್ಕರಿದ್ದರು. ಪಟ್ಟಣದಲ್ಲಿದ್ದ ರೋಮನ್ ಕ್ಯಾಥೊಲಿಕರು ತಮ್ಮನು ಕ್ರೊಯಾಟರು ಎಂದು ಗುರುತಿಸಿಕೊಳ್ಳಬಹುದಾಗಿತ್ತು, ಆದರೆ ಅವರು ತಮ್ಮನ್ನು ನಗರದ ಸ್ಥಳೀಯರೆಂದು ಭಾವಿಸಿದ್ದರೇ ಹೊರತು ಕ್ರೊಯೇಷಿಯಾದ ಭಾಗವಾಗಿ ಇರುವವರೆಂದಲ್ಲ. ಬ್ರಿಂಗಾಳು ಜನಾಂಗೀಯ ಗುಂಪುಗಳ ರಾಜಕೀಯಕರಣ ಮತ್ತು ಸಜ್ಜುಗೊಳಿಸುವಿಕೆಯ ಪ್ರಕ್ರಿಯೆಯು ಸ್ಥಳೀಯ ಸಮಾಜವನ್ನು ವ್ಯಾಪಿಸಿದ್ದನ್ನು ನೋಡಿದ್ದಾಳೆ. ಆಕೆ ಅಲ್ಲಿ ನಡೆದ ಪ್ರಕ್ರಿಯೆಗಳನ್ನು ನಿರೂಪಿಸಲೂ ಸಹ ಯತ್ನಿಸಿದ್ದಾಳೆ. ಅದೊಂದು ಮುಸ್ಲಿಂ/ರೋಮನ್ ಕ್ಯಾಥೊಲಿಕ್ ಸೀಮೆಯನ್ನು ಸಮತೂಗಿಸುತ್ತಿರುವ, ಒಂದು ಜಾಲಬಂಧದಲ್ಲಿರುವ ಜನರ ಕರುಣಾಜನಕವಾದ ಮಾನವ ಕತೆ - ಈ ಪ್ರವರ್ಗ-ಸೀಮಯು ಸಂಪ್ರದಾಯಗಳಲ್ಲಿ, ಅಸ್ಮಿತೆಗಳಲ್ಲಿ, ಭಿನ್ನತೆಗಳನ್ನು ಒಳಗೊಂಡಿದ್ದರೂ, ವಿಸ್ತಾರವಾಗಿದ್ದ ಹಂಚಿಕೊಂಡ ಸಾಂಸ್ಕೃತಿಕ ವಿಷಯಗಳು ಮತ್ತು ಜನರನ್ನು ಬಿಗಿಯಾಗಿ ಒಟ್ಟಿಗೆ ಹಿಡಿದಿಟ್ಟಿದ್ದ ಸಾಮಾಜಿಕ

ಜಾಲಬಂಧವಾಗಿತ್ತು. ವಿಭಿನ್ನ ಪ್ರವರ್ಗಗಳಿಗೆ ಸೇರಿದ ಹುಡುಗ/ಹುಡುಗಿಯರು ಪರಸ್ಪರ ಪ್ರೇಮಿಸುವ ವಿನ್ಯಾಸಗಳನ್ನೊಳಗೊಂಡ ಅನೇಕ ಅಂತರ್ವಿವಾಹಗಳು ನಡೆಯುತ್ತಿದ್ದ ವಾಸ್ತವಿಕತೆಯನ್ನು ನಿಭಾಯಿಸುತ್ತಿದ್ದರು, ಮತ್ತು ಅಗೋಚರವಾಗಿರುವ ವೈಮನಸ್ಯಗಳ (fault lines) ಹೊರತಾಗಿಯೂ ಹೇಗೆ ಈ ಸಂಬಂಧಗಳಿಗೆ ಅವಕಾಶ ಕಲ್ಪಿಸಿಕೊಡಬಹುದು ಎಂದು ತಿಳಿಸುವ ಜನಸಾಮಾನ್ಯ ಲೋಕಜ್ಞಾನವನ್ನೂ ಹೊಂದಿದ್ದರು. ಆದಾಗ್ಯೂ, ಹಂತಹಂತವಾಗಿ ರಾಜಕೀಯ ಮಧ್ಯಸ್ಥಗಾರರು ಅವರನ್ನು ಸಜ್ಜುಗೊಳಿಸಿದರು. ಯುವಜನರಿಗೆ ಯಾವುದೇ ನೈಜವಾದ ಆಯ್ಕೆ ಕೊಡದೇ, ಒತ್ತಾಯಪೂರ್ವಕವಾಗಿ ಒಂದು ಗುಂಪನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸನ್ನಿವೇಶಗಳಲ್ಲಿ ಅವರು ಸಿಲುಕಿಕೊಂಡರು. ಹೀಗಿದ್ದರೂ, ಹಳ್ಳಿಯಲ್ಲಿದ್ದ ವೃದ್ಧ ಮಹಿಳೆಯರು ಒಟ್ಟುಗೂಡಿ, ಅವರ ಮಕ್ಕಳು ಮತ್ತು ಗಂಡಂದಿರು ದೂರದ ಗುಡ್ಡಗಳಲ್ಲಿ ಪರಸ್ಪರರನ್ನು ಕೊಲ್ಲುತ್ತಿರುವ ಸುದ್ದಿಗಳನ್ನು ಹಂಚಿಕೊಳ್ಳುವುದನ್ನು ಮಾತ್ರ ಬಹಳ ಕಾಲ ಮುಂದುವರೆಸಿದರು. ವೈವಿಧ್ಯತೆ ಮತ್ತು ಬಹುಸಾಂಸ್ಕೃತಿಕತೆಯ ಶ್ರೀಮಂತವಾದ ಬಂಡವಾಳಯುಕ್ತ ಸಜೀವ ಬಹುತರದ ಸಮುದಾಯಗಳನ್ನು ಹಂತಹಂತವಾಗಿ ನಾಶಪಡಿಸಲಾಯಿತು.

ಈ ಪ್ರಕ್ರಿಯೆಯು ವಿಶಾಲವಾದ ರಾಷ್ಟ್ರೀಯತೆ ಮತ್ತು ವಿಶಾಲತರವಾದ ಅಂತರಾಷ್ಟ್ರೀಯ ಸಂಸ್ಥೆಗಳಿಗೆ ಪ್ರತಿಕ್ರಿಯೆಯಾಗಿ ಮತ್ತು ಪರಸ್ಪರಕ್ರಿಯೆಯಲ್ಲಿ ತೆರೆದುಕೊಳ್ಳುತ್ತದೆ, ಅವುಗಳ ಅನುಪಸ್ಥಿತಿಯಲ್ಲಲ್ಲ ಎಂದು ಒತ್ತಿ ಹೇಳುವುದು ಯೋಗ್ಯ. ಆದಾಗ್ಯೂ, ಇಂತಹ ಸಂದರ್ಭಗಳಲ್ಲಿ ಉಂಟಾಗುವ ಜನಾಂಗೀಯ ಸಜ್ಜುಗೊಳಿಸುವಿಕೆಯು ಅಗತ್ಯವಾಗಿ ರಾಷ್ಟ್ರೀಯತೆಯಾಗಿರಬೇಕಾಗಿಲ್ಲ. ಹಲ ಸಂದರ್ಭಗಳಲ್ಲಿ, ಬಹುಸಾಂಸ್ಕೃತಿಕ ಪ್ರಭುತ್ವವೊಂದರಲ್ಲಿ ಕೇಂದ್ರವನ್ನು ನಿಯಂತ್ರಿಸಲು ಬಣಗಳಾಗಿ ಜನಾಂಗೀಯ ಗುಂಪುಗಳು ಸಜ್ಜುಗೊಳಿಸಲ್ಪಡುತ್ತವೆ ಅಥವಾ ಅವುಗಳು ಇಂತಹ ಪ್ರಭುತ್ವದ ಪರಿಧಿಗಳಲ್ಲಿ ಉಳಿದುಕೊಳ್ಳಲು ಪ್ರಯತ್ನಿಸಬಹುದು. ಅವುಗಳು ಪ್ರಾರಂಭಿಕವಾಗಿ, ಅವುಗಳ ಮಧ್ಯಸ್ಥಗಾರರಿಂದ ರಾಷ್ಟ್ರೀಯತಾವಾದೀಯ ಯೋಜನೆಗಳಾಗಿ ರೂಪಿಸಲ್ಪಟ್ಟಿರಬಹುದು, ಬಳಿಕ ಬೇರೆ ಉದ್ದೇಶಗಳನ್ನು ಈಡೇರಿಸುವತ್ತ ಚಲಿಸಬಹುದು ಅಥವಾ ತಿರುವು ಮುರುವಾಗಬಹುದು. ಉಭಯ ಸಂದರ್ಭಗಳಲ್ಲೂ ಪ್ರಸಕ್ತ ತಂತ್ರಗಳು, ಪ್ರಭುತ್ವದ ರಚನೆಯಲ್ಲಿ ಅವುಗಳು ನಡೆಯುವ ಪರಿಸ್ಥಿತಿಗಳನ್ನೂ ಮತ್ತು ನಿರ್ದಿಷ್ಟ ಅವಕಾಶಗಳನ್ನೂ ಪ್ರತಿಬಿಂಬಿಸುತ್ತವೆ. ಇಂತಹ ಜನಾಂಗೀಯ ಸಜ್ಜುಗೊಳಿಸುವಿಕೆಯು ಸರ್ವಾಧಿಕಾರವುಳ್ಳ ಪ್ರಭುತ್ವಗಳಲ್ಲಿ ಸುಲಭವಾಗಿ ಆಗುವ ಸಾಧ್ಯತೆ ಕಡಮೆ ಎನ್ನುವುದು ಸ್ಪಷ್ಟವಾಗುತ್ತಿದೆ. ಟಿಟೋ(Tito)ವಿನ ಯುಗೋಸ್ಲಾವಿಯಾ ಪ್ರಭುತ್ವವು, ಆತನ ನಂತರದ ಕಾಲದಲ್ಲಿ ವಿಘಟನೆಯಾದ ಸಂದರ್ಭಕ್ಕಿಂತ, ಆತನಿದ್ದಾಗ, ಆತನ ಆಳ್ವಿಕೆಯಲ್ಲಿ ಒಗ್ಗೂಡಿಸದಾಗಿತ್ತು ಎನ್ನುವುದು ಏನೂ ಕಾಕತಾಳೀಯವಲ್ಲ. ಭಯೋತ್ಪಾದನೆ ಪ್ರಬಲವಾಗಿದ್ದಾಗ ಸೋವಿಯತ್ ಒಕ್ಕೂಟವು ಒಟ್ಟಿಗೆ ಹಿಡಿಯಲ್ಪಟ್ಟಿದ್ದು ಕಾಕತಾಳೀಯವಲ್ಲ. ರಾಜಕೀಯ ನಾಯಕತ್ವಕ್ಕಾಗಿ ಸ್ಪರ್ಧೆಯು ಮುಕ್ತವಾಗಿರುವ ಪರಿಸ್ಥಿತಿಗಳಲ್ಲಿ ಮತ್ತು ಹೆಚ್ಚು ವಿಕೇಂದ್ರಿತವಾಗಿರುವಲ್ಲಿ ಮಧ್ಯಮ ಶ್ರೇಣಿಯ ರಾಜಕೀಯ ಮಧ್ಯಸ್ಥಗಾರರಿಗೆ ಅವಕಾಶಗಳು ತುಂಬಾ ಅಧಿಕವಾಗಿರುತ್ತದೆ. ಅದು ಜನಾಂಗೀಯ ಅಸ್ಮಿತೆಗಳಂತಹ ಅಸಂಘಟಿತ ನಿರ್ದಿಷ್ಟ ಸ್ವಹಿತಾಸಕ್ತಿ ಗುಂಪುಗಳನ್ನು ಹೆಚ್ಚು ಆಕರ್ಷಕವಾಗಿಯೂ ಮತ್ತು ಅವುಗಳನ್ನು ಸಜ್ಜುಗೊಳಿಸುವುದನ್ನು ಹೆಚ್ಚು ಪ್ರಾಯೋಗಿಕವಾಗಿಯೂ ಮಾಡುತ್ತದೆ.

ಮತ್ತೊಂದೆಡೆ ಪ್ರಭುತ್ವದ ರಚನೆಯು ನೇರವಾಗಿ ಜನಾಂಗೀಯ ಗುಂಪುಗಳನ್ನೇ ಆಧರಿಸಿರಬಹುದು. ಇಡೀ ಸಾಮ್ರಾಜ್ಯವನ್ನೇ ಆವರಿಸಿದ್ದು, ಒಟ್ಟಾಗಿ ಒಳಗೊಂಡಂತಹ ಕಾಯಕ ವರ್ಗಗಳ ವ್ಯವಸ್ಥೆಯೊಳಗೆ ಸಾಂಸ್ಕೃತಿಕ ಗುಂಪುಗಳನ್ನು ತಂದ ವಿಶಿಷ್ಟವಾದ ಸಂಘಟನೆಯಾಗಿದ್ದು, ಯೂರೋಪಿನ ಶ್ರೇಷ್ಠ ಬಹುಜನಾಂಗೀಯ ಮತ್ತು

ಬಹುಸಾಂಸ್ಕೃತಿಕ ರಚನೆ ಅಗಿದ್ದುದ್ದೆಂದರೆ ಅದು ಆಟೊಮನ್ ಸಾಮ್ರಾಜ್ಯ. ಆ ಸಂರಚನೆಯಲ್ಲಿ ಜನಾಂಗೀಯ ಸಂಘರ್ಷಣೆಗಳು ಮತ್ತು ಜನಾಂಗೀಯ ನಿರ್ನಾಮಗೊಳಿಸುವಿಕೆ ಮತ್ತು ದೇಶ ಭ್ರಷ್ಟಗೊಳಿಸುವಿಕೆಗಳು ಇದ್ದವಾದರೂ ಹೆಚ್ಚಿನ ಪ್ರಜಾಸತ್ತಾತ್ಮಕ ಸರ್ಕಾರಗಳು, ಜನಾಂಗೀಯ ಚಳುವಳಿಗಳಿಗೆ ಮತ್ತು ಸಜ್ಜುಗೊಳಿಸುವಿಕೆಗೆ ಕಾರಣವಾಗುವ ಹೆಚ್ಚು ಮುಕ್ತವಾದ ರಾಜಕೀಯ ಪೈಪೋಟಿಗೆ ಅವಕಾಶ ಒದಗಿಸುತ್ತಿರುವುದನ್ನು ನೋಡಲು ನಾವಿಂದು ಪ್ರಾರಂಭಿಸುತ್ತಿದ್ದೇವೆ. ಸ್ಪಷ್ಟವಾಗಿ, ನಾವು ಪ್ರಜಾಸತ್ತೆ ಎಂದು ಕರೆಯುವುದು ಜನಪ್ರಿಯ ಇಚ್ಚೆಗಳನ್ನು ನೇರವಾಗಿ ವ್ಯಕ್ತಪಡಿಸುವ ಸರಳ ವ್ಯವಸ್ಥೆಗಳಲ್ಲ, ಅವು ಜನಪ್ರಿಯವಾದ ಆಮಿಷದ ನಿರ್ದಿಷ್ಟ ಸ್ಥಾಪಿತ ಪ್ರಕ್ರಿಯೆಗಳ ಮೂಲಕ ನಿಯಂತ್ರಿಸಲ್ಪಡುವ ವ್ಯವಸ್ಥೆಗಳಾಗಿವೆ. ಅವುಗಳು ರಾಜಕೀಯ ನಾಯಕತ್ವ ಮತ್ತು ಪೈಪೋಟಿಗೆ ಮುಕ್ತ ಅವಕಾಶಗಳನ್ನು ಒದಗಿಸುತ್ತವೆ ಮತ್ತು ಅಸ್ಮಿತೆಯಲ್ಲಿ ಜನಾಂಗೀಯ ವ್ಯತ್ಯಾಸಗಳ ಆಧಾರಗಳನ್ನು ಬಳಸಲು ಅವಕಾಶವಿದ್ದಲ್ಲಿ, ಯಾರಾದರೂ ಅದನ್ನು ಗುರುತಿಸಿ ಬಳಸಿಕೊಳ್ಳುವುದಂತೂ ಖಚಿತ. ಪ್ರಭುತ್ವದ ಮೇಲೆ ಹಿಡಿತ ಸಾಧಿಸುವುದಕ್ಕೆ ಸಂಬಂಧಿಸಿದಂತೆ ಹೊರಹೊಮ್ಮುತ್ತಿರುವ ಈ ರಾಜಕೀಯ ನಿರ್ದಿಷ್ಟ ಸ್ವಹಿತಾಸಕ್ತಿ ಗುಂಪುಗಳ ನಡುವೆ ಇರುವ ಭಿನ್ನತೆಗಳು ಕೆಲವೊಮ್ಮೆ ದುರದೃಷ್ಟಕರವಾಗಿ ತೀಕ್ಷ್ಣಗೊಳ್ಳುತ್ತವೆ ಅಥವಾ ಪ್ರತ್ಯೇಕತಾವಾದದತ್ತ ಮುನ್ನಡೆಸುತ್ತವೆ.

ಅಂತಿಮವಾಗಿ, ಜನಾಂಗೀಯ ಉಲ್ಬಣದ ಹಿನ್ನೆಲೆಯಲ್ಲಿ ಅಹಿಂಸಾತ್ಮಕ ಪರಿಹಾರಗಳ ಸಾಧ್ಯತೆಗಳನ್ನು ಕುರಿತು ಚಿಂತಿಸೋಣ. ನಾರ್ವೆಯಲ್ಲಿ ಪಾಕೀಸ್ಥಾನಿಗಳ ವಿಷಯಗಳನ್ನು ನೆನಪು ಮಾಡಿಕೊಳ್ಳಿ. ಆ ಸನ್ನಿವೇಶದಲ್ಲಿ ಕೆಲಸ ಮಾಡುತ್ತಿರುವ ನಿರಂತರ ಪ್ರಕ್ರಿಯೆಗಳನ್ನು ನಿಮಗೆ ನೆನಪು ಮಾಡಿಕೊಡಲು ಇಚ್ಚಿಸುತ್ತೇನೆ: ಅವು ಸೇತುವೆಗಳನ್ನು ನಿರಂತರವಾಗಿ ಕಟ್ಟಲಾಗುವ, ಉಕ್ಕಿ ಹರಿಯುವ ಅನುಭವ ಮತ್ತು ಕಲಿಕೆಯ ಮೂಲಕ ಸೀಮಾರೇಖೆಗಳನ್ನು ದುರ್ಬಲಗೊಳಿಸಲಾಗುವ, ಸಂಸ್ಕೃತಿಯಲ್ಲಿ ಪ್ರತಿ ಭಿನ್ನತೆಯನ್ನು ವರ್ಧಿಸಲಾಗುವ, ಮತ್ತು ಜಾಲಬಂಧಗಳನ್ನು ಇನ್ನೂ ಹೆಚ್ಚು ನಿರಂತರವಾಗಿ ಮಾಡಲಾಗುವ, ನಿರಂತರ ಪ್ರಕ್ರಿಯೆಗಳಾಗಿವೆ. ಇದೇ ಸಮಯದಲ್ಲಿ, ಸಂಬಂಧಗಳನ್ನು ಪ್ರತಿರೋಧಿಸುವ ಮತ್ತು ಅಂತರತೆಯನ್ನು ಸೃಷ್ಟಿಸುವ, ನಿಯಂತ್ರಿಸುವ, ಬಾಯಿಮುಚ್ಚಿಸುವ ಮತ್ತು ಅಳಿಸುವ ಪ್ರಕ್ರಿಯೆಗಳೂ ಸಹ ಕೆಲಸ ಮಾಡುತ್ತಿರುತ್ತವೆ. ನನ್ನ ಪ್ರಕಾರ, ನಾವೇನಾದರೂ ಸಂದರ್ಭದ ತೀಕ್ಷ್ಣತೆಯನ್ನು ತಗ್ಗಿಸಲು ಬಯಸಿದರೆ, ಪ್ರೇರಕಶಕ್ತಿಯ ಈ ಪ್ರಮುಖ ತಿಳವಳಿಕೆಯನ್ನು ಈ ಪ್ರಯತ್ನಕ್ಕೆ ತರಬೇಕಾಗಿರುವುದು ಮುಖ್ಯ. ಜನಾಂಗೀಯ ಸಜ್ಜುಗೊಳಿಸುವಿಕೆ ಮತ್ತು ಪ್ರತ್ಯೇಕತೆ ಉಂಟುಮಾಡುವ ನೆಲೆಗಳನ್ನು ವಿರೋಧಿಸುವುದೇ ಗುರಿಯಾಗಬೇಕು - ಬೇರೆ ಪದಗಳಲ್ಲಿ ಹೇಳುವುದಾದರೆ, ಸಂಸ್ಕೃತಿಯ ಮಿಥ್ಯಾಕಲ್ಪನೆಗಳನ್ನು ವಿರೋಧಿಸಬೇಕು. ನಾವು ಈ ನಿರ್ದಿಷ್ಟ ಭಿನ್ನತೆಗಳ ಬಗ್ಗೆ ಜನರಿಗೆ ಇರುವ ಅರಿವಿಗೆ ಹೆಚ್ಚು ಪ್ರಾಮುಖ್ಯತೆ ನೀಡದೆ, ಸಾಮಾಜಿಕವಾಗಿ ಸಮ್ಮಿಳಿತವಾದ ವ್ಯಕ್ತಿಗಳಾಗಿ, ಅವರು ಹೊಂದಿರುವ ಬೇರೆಲ್ಲಾ ಅಡ್ಡಾದಿಡ್ಡಿಯಾದ ಭಿನ್ನತೆಗಳು ಮತ್ತು ಸಹ ಆಸಕ್ತಿಗಳ ಕಡೆಗೆ ಅವರ ಗಮನವನ್ನು ಸೆಳೆಯಬೇಕು. ನಾವು ನಿರ್ದಿಷ್ಟವಾಗಿ ಸಮಾಲೋಚನೆಗಳಿಗಾಗಿ, ವೇದಿಕೆಗಳನ್ನು ಸೃಷ್ಟಿಸಬೇಕು: ಅವು ಸಾಮಾನ್ಯ ಆಸಕ್ತಿಗಳ ಆಧಾರದ ಮೇಲೆ ಮತ್ತು ವಿಶಾಲ ದೃಷ್ಟಿಕೋನವಿರುವ, ಹೆಚ್ಚು ನಿರ್ಬಂಧಗಳಿಲ್ಲದೆ ನಿಲುವುಗಳನ್ನು ಪ್ರತಿಪಾದಿಸಲು ಮತ್ತು ಪರಿಣಾಮಕಾರಿಯಾಗಿರಲು ಸೇತುವೆಗಳನ್ನು ನಿರ್ಮಿಸುವ ಪ್ರಕ್ರಿಯೆಗಳಿಗೆ ಅನುವು ಮಾಡಿಕೊಡುವ ವೇದಿಕೆಗಳಾಗಿರಬೇಕು. ಇದೇ ಸ್ಕಾಂಡಿನೇವಿಯಾದ ಕಾರ್ಮಿಕ ಸಂಬಂಧಗಳ

ಸಾಮೂಹಿಕ ಚೌಕಾಶಿ ಮಾಡುವಿಕೆಯ ಸಾರ. ನೀವು ನಿರ್ದಿಷ್ಟ ಗುಂಪುಗಳ ವಿರೋಧಿಸುವ ಆಸಕ್ತಿಗಳಿಂದ ಪ್ರಾರಂಭಿಸಿ ಅವುಗಳನ್ನು ಒಟ್ಟಿಗೆ ತರಲು ಪ್ರಯತ್ನಿಸುವುದಲ್ಲ. ನೀವು ಸಾಮಾನ್ಯ ನೆಲೆಯಿಂದ ಪ್ರಾರಂಭಿಸಬೇಕು. ನೀವು ಪಕ್ಷಗಳ ನಡುವೆ ಇರಬಹುದಾದ ಸಾಮಾನ್ಯ ಆಸಕ್ತಿಗಳನ್ನು ಕೇಳಿದ ನಂತರ ಆ ಸಾಮಾನ್ಯ ನೆಲೆಯನ್ನು ವಿಸ್ತರಿಸಲು ಸಮಾಲೋಚಿಸಬೇಕು. ಈ ಕಾರ್ಯವಿಧಾನವು ಮಧ್ಯಸ್ಥಗಾರರು ಜನಾಂಗೀಯ ಗುಂಪುಗಳನ್ನು ಸಜ್ಜುಗೊಳಿಸಲು ಬಳಸುವ ಕಾರ್ಯವಿಧಾನಕ್ಕೆ ವಿರುದ್ಧವಾದದ್ದು. ಆದುದರಿಂದ ನೀವು ಯಾವುದಾದರೂ ಜನಾಂಗೀಯ ಸಂಘರ್ಷದೊಂದಿಗೆ ಸಮಾಲೋಚನೆ ನಡೆಸುತ್ತಿದ್ದರೆ, ವೇದಿಕೆಯು ಹೇಳುತ್ತಿರುವುದನ್ನು ನಿರ್ದಿಷ್ಟ ಸ್ವಹಿತಾಸಕ್ತಿ ಗುಂಪುಗಳಿಗೆ ಮುಖಂಡರು ತಿಳಿಸುತ್ತಿರಬೇಕಾದರೆ ಅವರು ಆ ಗುಂಪುಗಳ ಪ್ರತಿನಿಧಿಗಳಾಗಿ ಸಂಕುಚಿತ ದೃಷ್ಟಿಯಿಂದ ಮಾತನ್ನಾಡಲು ಅವಕಾಶ ಮಾಡಿಕೊಡುವ ವೇದಿಕೆಯನ್ನು ಸೃಷ್ಟಿಸಬಾರದು - ಅದು ಒಂದು ಒಪ್ಪಂದಕ್ಕೆ ಬರಲಾರದ ಸ್ಥಿತಿಯಲ್ಲಿ ಮಾತ್ರ ಫಲಿಸಬಹುದು. ನೀವು ಸಂವಾದವನ್ನು ಸೀಮಾರೇಖೆಗಳನ್ನು ಗುರುತಿಸುವ ಭಿನ್ನತೆಗಳ ಬಗ್ಗೆ ಅಲ್ಲದೆ, ಆ ಒಂದು ಮುಖಾಮುಖಿ ರೇಖೆಗೆ ಅನುಸಾರವಾಗಿ ರಚಿಸಲಾಗದ ಆದರೆ ಎಲ್ಲಾ ಇತರ ಅಸಕ್ತಿಗಳಿಗೆ ಅನುಗುಣವಾಗಿ ಇರುವ ರೀತಿಯಲ್ಲಿ ನಿರೂಪಿಸಬೇಕು. ಪ್ಯಾಲೆಸ್ಟೀನಿಯನ್ನರು ಮತ್ತು ಇಸ್ರೇಲಿಗಳ ನಡುವಿನ ಮಧ್ಯಸ್ಥಿಕೆಯಲ್ಲಿ ಇದ್ದ ಸಮಾಲೋಚನೆಯ ಬಿಕ್ಕಟ್ಟನ್ನು ಮುರಿಯಲು ರೋಧ ಲಾರ್ಸನ್Roed (Roed Larsen) ಮಾಡಿದ್ದು ಇದನ್ನೇ. ಇದು ಜಯಪ್ರದವಾಯಿತು ಎಂದು ಹೇಳುವುದು ಅಕಾಲಿವಾದರೂ, ಇನ್ನೂ ಭರವಸೆಯಂತೂ ಇದೆ. ಅದನ್ನು ಬಾಸ್ನಿಯನ್ ಸಮಾಲೋಚನೆಗಳಿಗೆ ಹೋಲಿಸಿದರೆ ಒಂದು ಸ್ಪಷ್ಟ ವ್ಯತ್ಯಾಸವನ್ನು ಕಾಣುತ್ತೇವೆ. ಬಾಸ್ನಿಯಾ ಸಮಾಲೋಚಕರು ತಮ್ಮ ಸಮಸ್ಥಿತಿಯ ಸಂಕೇತಗಳು ಮತ್ತು ನಿಲುವುಗಳೊಡನೆ ಇದ್ದಾರೆ ಮತ್ತು ಸಮಾಲೋಚಕರು ಅವರನ್ನು ಒಟ್ಟಿಗೆ ತರಲು ಯತ್ನಿಸುತ್ತಿದ್ದಾರೆ. ನಾನು ಜನಾಂಗೀಯತೆಯ ಪ್ರೇರಕಶಕ್ತಿಗಳ ಮೂಲಕ ಸೂಚಿಸಲ್ಪಟ್ಟದ್ದನ್ನು ಬಹಿರಂಗಪಡಿಸಲು ಮಾಡಿದ ಪ್ರಯತ್ನಕ್ಕೆ ವಿರುದ್ಧವಾದ ತಂತ್ರ ಅದಾಗಿದೆ. ಯಾವುದೇ ಅದೃಡ ಮತ್ತು ಸೀಮಿತ ಎಂದು ಗುರುತಿಸಲಾದ ಸಾಮಾನ್ಯ ನೆಲೆ ಇರಲಿ, ಸಾಮಾನ್ಯ ಆಸಕ್ತಿಗಳನ್ನು ಅನ್ವೇಷಿಸುವುದರ ಮೂಲಕ ಮತ್ತು ಅದನ್ನು ಹಂತಹಂತವಾಗಿ ವಿಸ್ತರಿಸುವ ದೃಷ್ಟಿಯಿಂದ, ನೀವು ಅಲ್ಲಿಂದಲೇ ಪ್ರಾರಂಭಿಸಬೇಕು. ಆ ರೀತಿಯಲ್ಲಿ ಮಾತ್ರವೇ ಬೃಹತ್ ಸಮಾಜದಲ್ಲಿ ನಿರಂತರವಾಗಿ ಆಗುತ್ತಿರುವ ಸಾಂಸ್ಕೃತಿಕ ಭಿನ್ನತೆಗಳ ಮೇಲೆ ಮತ್ತು ಸಮಸ್ತ ಜೀವಗಳ ಕಡೆ ಗಮನ ಹರಿಸುವುದರ ಮೂಲಕ ನಾವು ಜನಾಂಗೀಯ ಸೀಮಾರೇಖೆಗಳ ಇಬ್ಭಾಗಿಸುವಿಕೆಯನ್ನು ತಡೆಗಟ್ಟಬಹುದು.

ಅನುವಾದ: ಡಾ.ಎ ಜಿ ಗೋಪಾಲ ಕೃಷ್ಣ ಕೊಳ್ತಾಯ
ಪರಿಶೀಲನೆ: ಡಾ ಗಾಯತ್ರಿದೇವಿ ಕೆ ಜಿ

Source: Barth,F. (1995). Ethnicity and the concept of culture